ಮಂಗಳೂರಿನಲ್ಲಿರುವುದರಿಂದ ಅಲ್ಲಿಗೆ ದೊಡ್ಡ ದೊಡ್ಡ ಸಾಲಕ್ಕೆ ನಮ್ಮ ರೈತರಿಗೆ ಹೋಗಲಿಕ್ಕೆ ಆಗುತ್ತಿಲ್ಲ. ಸಕ್ಕರೆ ಕಾರ್ಖಾನೆಗೆ ಸಾಲವನ್ನು ಕೊಡಬಹುದು. ಡಿ.ಸಿ.ಸಿ.ಬ್ಯಾಂಕಿಗೆ ಬೇಕಾದಂಥ ಸೆಕ್ಯುರಿಟಿ ಇದೆ. ಹಾಗಾಗಿ ಈ ರೀತಿ ಉತ್ತರ ಕೊಡುವಂತಾದ್ದು ಡಿ.ಸಿ.ಸಿ.ಬ್ಯಾಂಕಿಗೆ ಸರಿಯಲ್ಲ, ಉಡುಪಿಗೆ ಪ್ರತ್ಯೇಕವಾದ ಡಿ.ಸಿ.ಸಿ.ಬ್ಯಾಂಕ್ ಅನ್ನು ಮಾಡುವಂತೆ ತಮ್ಮಂತಹ ಪ್ರಭಾವಶಾಲಿಯಾದ ಹಿರಿಯ ಸಚಿವರಿರುವ ಸಂದರ್ಭದಲ್ಲಿ ಇದಾಗಬೇಕೆಂದು ವಿನಂತಿಯನ್ನು ಮಾಡಿಕೊಂಡು ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಮುಕ್ತಾಯವಾಯಿತು. ಮಧ್ಯಾಹ್ನ 3.15 ಗಂಟೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ಸದನವನ್ನು ಮಧ್ಯಾಹ್ನ 3.15 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2.12 ನಿಮಿಷಕ್ಕೆ ಭೋಜನ ವಿರಾಮಕ್ಕೆಂದು ಮುಂದೂಡಿಸಲ್ಪಟ್ಟು ಪುನಃ 3.15. ಗಂಟೆಗೆ ಸೇರುವಂತೆ ನಿರ್ಧರಿಸಿತು)

ಸದನವು ಪುನಃ 3 ಗಂಟೆ 25 ನಿಮಿಷಕ್ಕೆ ಪುನರಾರಂಭಗೊಂಡಿತು

ಮಾನ್ಯ ಅಧ್ಯಕ್ಷರು ಶ್ರೀ ಕೃಷ್ಣರವರು ಅಧ್ಯಕ್ಷಪೀಠದಲ್ಲಿದ್ದರು

5. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: 43 ಖಾಸಗಿ ಕೈಗಾರಿಕಾ ಕೇಂದ್ರಗಳಿಗೆ ಪರೀಕ್ಷೆಯ ಪ್ರವೇಶಪತ್ರಿಕೆ ಹೋಗಿಲ್ಲದಿರುವ ಬಗ್ಗೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ ನಾಡಿದ್ದು 22ನೇ ತಾರೀಖು ಶುಕ್ರವಾರ ಐಟಿಐ ಕಾಲೇಜು ಪರೀಕ್ಷೆಗಳು ಆರಂಭವಾಗಬೇಕಾಗಿದೆ. 43 ಖಾಸಗಿ ಕೈಗಾರಿಕಾ ಕೇಂದ್ರಗಳಿಗೆ ಈವರೆಗೆ ಪ್ರವೇಶಪತ್ರಿಕೆ ಹೋಗಿಲ್ಲ. ಮಂತ್ರಿಗಳ ಹತ್ತಿರ ಹೋಗಿ ಅವರೆಲ್ಲಾ ಕೇಳಿದಾಗ ಡೈರೆಕ್ಟರ್‌ಗೆ ಹೇಳಿದ್ದೇನೆ ಅನ್ನುತ್ತಾರೆ, ಡೈರೆಕ್ಟರ್ ಹತ್ತಿರ ಹೋದರೆ ಸೆಕ್ರೆಟರಿಯವರಿಗೆ ಹೇಳಿದ್ದೇವೆ ಅಂತ ಹೇಳಿದಾಗ ಹತಾಶರಾಗಿ ಆ 43 ಕಾಲೇಜು ಸಂಘದವರು ಈಗ ನಮ್ಮನ್ನು ಬಂದು ಭೇಟಿ ಮಾಡಿದ್ದಾರೆ. ಇವತ್ತೇ ಏನಾದರೂ ವ್ಯವಸ್ಥೆಯಾಗಬೇಕಾಗಿದೆ. ದೋಷ ಏನಾದರೂ ಇರಲಿ ಮ್ಯಾನೇಜ್‌ಮೆಂಟಿನದೋ ಅವರದೋ ಎಂಬ ಬಗ್ಗೆ ಕೇಳುವುದಿಲ್ಲ ಆ ಮಕ್ಕಳಿಗೆ ನಾಡಿದ್ದು ಪರೀಕ್ಷೆ ತೆಗೆದುಕೊಳ್ಳುವುದರ ಅವಕಾಶ ಮಾಡಿಕೊಡಬೇಕು, ಅದಕ್ಕಾಗಿ ತಮ್ಮ ಅನುಮತಿ ಪಡೆದು ಈ ಪ್ರಸ್ತಾಪ ಮಾಡುತ್ತಿದ್ದೇನೆ. ದಯಮಾಡಿ ಸರ್ಕಾರದ ವತಿಯಿಂದ ಜವಾಬ್ದಾರಿ ತೆಗೆದುಕೊಂಡು ಈ 43 ಕಾಲೇಜುಗಳಿಗೆ

ತಕ್ಷಣ ಅಡ್ಮಿಶನ್ ಟಿಕೆಟ್‌ಗಳನ್ನು ಕೊಡಿಸುವ ವ್ಯವಸ್ಥೆ ಮಾಡುತ್ತೀರಾ ಅಂತ ಕೇಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರ ಸಮಸ್ಯೆ. ನಾನು ಇದನ್ನು ಸಂಬಂಧಪಟ್ಟ ಸಚಿವರು ಗಮನಕ್ಕೆ ತಂದು ತಕ್ಷಣ ಇದಕ್ಕೆ ಪರಿಹಾರ ಕಂಡುಹಿಡಿಯುವುದಕ್ಕೆ ಹೇಳುತ್ತೇನೆ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ಅಪ್ರೂವಲ್ ಕೊಟ್ಟಿದ್ದಾರೆ. ಎಲ್ಲಾ ಆಗಿಬಿಟ್ಟಿದೆ. ಪ್ರವೇಶಪತ್ರಿಕೆ ಕೊಡೋಕೆ ಯಾವುದೋ ಕಮಿಟಿ ಶಿಫಾರಸ್ಸು ಹಿಡಿದುಕೊಂಡು ಕೂತಿದ್ದಾರೆ.

ಶ್ರೀ ವಿ.ದೇಶಪಾಂಡೆ: ಮಾನ್ಯ ಕಾರ್ಮಿಕ ಸಚಿವರು ಹತ್ತಿರ ಮಾತನಾಡುತ್ತೇನೆ.

6. ವಿತ್ತೀಯ ಕಾರ್ಯಕಲಾಪ

2005–06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಸರ್ಕಾರದ ಉತ್ತರ

(ಬೇಡಿಕೆಗಳ ಸಂಖ್ಯೆ 9, 18, 6, 16, ಮತ್ತು 10)

ಅಧ್ಯಕ್ಷರು: ಈಗ ಮಾನ್ಯ ಸಚಿವರಿಂದ ಉತ್ತರ.

ಶ್ರೀ ಆರ್.ವಿ.ದೇಶಪಾಂಡೆ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ ನಮ್ಮ ಸಹಕಾರ ಇಲಾಖೆಯ ಬೇಡಿಕೆ ಮೇಲೆ ಗೌರವಾನಿಂತ ಸದಸ್ಯರುಗಳಾದ ಮಾನ್ಯ ಉದಾಸಿಯವರು, ಮಾಧುಸ್ವಾಮಿಯವರು, ಬಂಗೇರರವರು, ರಾಮಸ್ವಾಮಿಯವರು, ಯೋಗೇಶಭಟ್‌ರವರು, ಜಯಪ್ರಕಾಶ್ ಹೆಗ್ಡೆಯವರು, ಶ್ರೀರಾಮರೆಡ್ಡಿಯವರು, ರಘುಪತಿಭಟ್ಟರರು ಹಾಗೂ ಹಲವಾರು ಸದಸ್ಯರುಗಳು ಟೀಕೆ ಟಿಪ್ಪಣಿ ಮಾಡಿದ್ದಾರೆ. ಕೆಲವು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಹಾಗಾಗಿ ಸಧ್ಯಾವಾದಷ್ಟು ಪ್ರಸ್ತಾಪಿತ ವಿಷಯದ ಮೇಲೆ ನಾನು ಬೆಳಕು ಚೆಲ್ಲಲಿಕ್ಕೆ ಪ್ರಯತ್ನ ಮಾಡುತ್ತೇನೆ. ಸಹಕಾರಿ ಚಳುವಳಿ ಅಥವಾ ಸಹಕಾರಿ ರಂಗ ಪ್ರಾರಂಭವಾಗಿ ನೂರು ವರ್ಷವಾಯಿತು. ಈ ದಿರ್ಘ ಕಾಲದಲ್ಲಿ ಸಹಕಾರಿ ರಂಗ ಬೆಳದುಬಂದಿದೆ. ರಾಷ್ಟ್ರದಲ್ಲಿ ಮಹಾತ್ಮಗಾಂಧಿ ಇರಬಹುದು ಜವಾಹರಲಾಲ್ ನೆಹರೂ ಇರಬಹುದು ಈ ಸಹಕಾರಿ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ಕೊಟ್ಟು ಸಹಕಾರದಿಂದ ಮುಖ್ಯವಾಗಿ ಗ್ರಾಮಾಂತರ ಪ್ರದೇಶದಲ್ಲಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಉನ್ನತಿ ಸಾಧ್ಯ ಅಂತ ಕರೆ ಕೊಟ್ಟು ರಾಷ್ಟ್ರ ಹಾಗೂ ರಾಜ್ಯಗಳಲ್ಲಿ ಹಸಿರು ಕ್ರಾಂತಿ ಮಾಡುವುದರಲ್ಲಿ, ಕ್ಷೀರಕ್ರಾಂತಿ ಮಾಡುವುದರಲ್ಲಿ ಸಕ್ಕರೆ ಕ್ರಾಂತಿ ಮಾಡುವುದರಲ್ಲಿ ಒಂದು ಅಗ್ರಗಣ್ಯ ಸ್ಥಾನ ಸಹಕಾರಿ ಕ್ಷೇತ್ರಕ್ಕೆ ಇಡೀ ದೇಶದಲ್ಲಿದೆ.